ಇದ್ದಳು. ಅಪ್ಪ ಬಿಳಿಯ ಪ್ಯಾಂಟ್ ಧರಿಸಿ, ಸೇವಂತಿಯ ಹಾರ ತೊಟ್ಟು ಸಂಜೆಯ ಕತ್ತಿಯಾಟಕ್ಕೆ ಸಜ್ಜುಗೊಳ್ಳುತ್ತಿದ್ದ. ಸಂಜೆ ಆರೂವರೆ ಆಗುತ್ತಿದ್ದ ಹಾಗೆ ಸಣ್ಣಗೆ ಆಯಾಸಗೊಂಡವಳಂತೆ, ಅಮ್ಮನ ಹೆಗಲಿಗೆ ಒರಗಿಕೊಂಡಳು. 'ಯಾಕೋ ತುಂಬಾ ಸುಸ್ತು, ಚಳಿ ಆಗ್ತಾಯಿದೆ. ನಾನು ಮನೆಗೆ ಹೋಗಿ ಮಾತ್ರೆ ಹಾಕ್ಕೊಂಡು ಮಲಗ್ತೀನಿ, ಕರಗ ಆರಂಭ ಆಗೋ ಹೊತ್ತಿಗೆ ತಮ್ಮನನ್ನ ಕಳಿಸು, ಅವನ ಜೊತೆ ಬರ್ತೀನಿ' ಎಂದಳು.

ಅವಳ ಹಣೆ ಮುಟ್ಟಿ, ಜ್ವರ ಇದ್ಯಾ ನೋಡಿ, 'ಚೆನ್ನಾಗೆ ಇದ್ಯಲ್ಲ' ಅಂದಳು ಪುಟ್ಟಮ್ಮ, 'ಇಲ್ಲಮ್ಮ, ಮಧ್ಯಾಹ್ನ ಯಾಕೋ ಒಂತರ ಇತ್ತು. ಈಗ್ಲೂ ತುಂಬಾ ಸುಸ್ತು ಆಗ್ತಾ ಇದೆ. ಇಲ್ಲ ಅಂದ್ರೆ ಅಪ್ಪನ ಕತ್ತಿವರಸೆ ಆಟ ನೋಡೋಕೆ ನನಗೂ ಆಸೆನೇ' ಅಂದಳು.

'ಸರಿ ನಾನು ಬರ್ತೀನಿ ಜೊತೆಗೆ ನಡಿ' ಎಂದಳು ಪುಟ್ಟಮ್ಮ.

'ಅಯ್ಯೋ ನೀನ್ ಯಾಕೆ? ನೀನು ಎಲ್ಲಾ ಮುಗಿಸಿಕೊಂಡು ಬಾ, ನಾನು ತಮ್ಮನನ್ನ ಕರೆದುಕೊಂಡು ಹೋಗ್ತೀನಿ' ಎಂದಳು ಅಮ್ಮ ಜೊತೆಗೆ ಬಂದರೆ ಪ್ಲಾನೆಲ್ಲ ತೋಪಾಗುವ ಭಯದಿಂದ.

ಸರಿ ಎಂದು ಪುಟ್ಟಮ್ಮ ತಮ್ಮನನ್ನು ಇವಳ ಜೊತೆಗೆ ಕಳುಹಿಸಿದಳು. ಅವನಿಂದ ಹೇಗೆ ಕಳಚಿಕೊಳ್ಳೋದು ಎಂದು ಯೋಚಿಸುತ್ತಾ ಮನೆಗೆ ಬಂದಳು. ತಮ್ಮನ ಬಳಿ, 'ಅಪ್ಪನ ಕತ್ತಿವರಸೆ ಎಷ್ಟು ಚೆನ್ನಾಗಿರುತ್ತೆ, ನೀನು ದೊಡ್ಡೋನು ಆದ್ಮೇಲೆ ಕತ್ತಿ ವರಸೆ ಮಾಡ್ತಿಯಾ?' ಎಂದಳು.

'ಮಾಡ್ತೀನಿ, ಈ ವರ್ಷನೇ ಮಾಡ್ತೀನಿ ಅಂದೆ ಅಪ್ಪನಿಗೆ. ಅದೆಲ್ಲ ಆಗಲ್ಲ, ಅದಕೆಲ್ಲ ದೀಕ್ಷೆ ಕೊಡ್ಬೇಕು. ಇದನ್ನ ಕಲಿಸ್ಬೇಕು, ಸುಮ್ನೆ ಮಕ್ಕಳ ಆಟ ಅಲ್ಲ ಎಂದುಬಿಟ್ಟ' ಎಂದ.

'ನೀನು ಬೇಕಾದ್ರೆ ಹೋಗೋ ಅಪ್ಪನ ಕತ್ತಿ ಆಟ ನೋಡೋಕೆ, ನಾನು ಇಲ್ಲೇ ಮಲಗಿರ್ತೀನಿ' ಎಂದಳು.

'ಬೇಡಪ್ಪ, ಅಮ್ಮ ನಿನ್ನ ಒಬ್ಬೆ ಬಿಟ್ಟು ಬಂದೆ ಅಂತ ಬಯ್ತಾಳೆ' ಎಂದ.

'ಅದು ಸರಿ ಅನ್ನು. ಆದ್ರೆ ಅಷ್ಟು ಜನಗಳ ಮಧ್ಯೆ, ಅಮ್ಮನಿಗೆ ನೀನು ಎಲ್ಲಿ ಕಾಣಿಸಬೇಕು, ನೋಡ್ಕೊಂಡು ವಾಪಸ್ಸು ಬಂದು ಬಿಡು ಬೇಕಾದ್ರೆ, ನಾನು ಬಾಗಿಲು ಹಾಕಿಕೊಂಡು ಮಲಗಿರ್ತೀನಿ' ಅಂದಳು.

ಅವನು ಕೊಂಚ ಯೋಚಿಸಿ, 'ಸರಿ, ನೀನು ನಿದ್ದೆ ಮಾಡು, ನಾನು ಹೋಗಿ ಬರ್ತೀನಿ' ಎಂದು ಹೇಳಿ ಬಾಗಿಲು ಮುಂದಕ್ಕೆ ಎಳೆದುಕೊಂಡು ಹೋದ.

ಅವನು ಹೋಗುವುದನ್ನೇ ಕಾಯುತಿದ್ದವಳು ಮೊದಲೇ ಬಚ್ಚಿಟ್ಟಿದ್ದ ಬ್ಯಾಗ್ ತೆಗೆದು ಎಲ್ಲವೂ ಇವೆ ಎಂಬುದನ್ನ ಮತ್ತೊಮ್ಮೆ ಖಾತ್ರಿ ಮಾಡಿಕೊಂಡು, ಬಾಗಿಲೆಳೆದುಕೊಂಡು ಯಾರಿಗೂ ಅನುಮಾನ ಬರದಂತೆ ಮೆಟ್ಟಲಿಳಿದು, ಹತ್ತಿರದಲ್ಲೇ ಇರುವ ಸ್ಟ್ಯಾಂಡಿನಿಂದ ಆಟೊ ಹಿಡಿದು ರೈಲ್ವೆ ಸ್ಟೇಷನ್ ಸೇರಿದಳು. ಆಗಲೇ ಸಮಯ ಎಂಟುವರೆ. ಇನ್ನೊಂದು ಗಂಟೆಯಲ್ಲಿ ಟ್ರೈನ್ ಹೋರಾಡುವುದರಲ್ಲಿತ್ತು.

ಮೊದಲೇ ಚರ್ಚಿಸಿದಂತೆ ಪಕ್ಕದ ಹೋಟೆಲಿಗೆ ಹೋದಳು. ಅಲ್ಲಿ ಬಾಲನ ಅಥವಾ ಮಂಜನ ಸುಳಿವಿರಲಿಲ್ಲ. ಬಾಲನಿಗೆ ಫೋನ್ ಮಾಡಿದಳು. ರಿಂಗ್ ಆದರೂ ಉತ್ತರ ಬರಲಿಲ್ಲ. ಮಂಜನ ಫೋನ್ ಸ್ವಿಚ್ ಆಫ್ ಆಗಿತ್ತು. ಗೊಂದಲ ಗಾಬರಿಯಿಂದ ಕೈಕಾಲಲೆಲ್ಲ ನಡುಕ ಹುಟ್ಟಿತು. ಏನಾಯಿತು ಇವರಿಬ್ಬರಿಗೆ ಅನ್ನುವುದೇ ಯೋಚನೆ. ಬಾಲ ಮನೆಯಲ್ಲಿ ಸಿಕ್ಕಿ ಹಾಕಿಕೊಂಡು ಬಿಟ್ಟನೆ? ಮಂಜನಾದರೂ ಬರಬೇಕಿತ್ತು, ಅಲ್ಲವೆ? ಇಬ್ಬರಿಗೂ ಏನಾದರೂ ಅನಾಹುತವಾಯಿತೇ? ಅಥವಾ ಇಬ್ಬರೂ ತನ್ನನ್ನು ಬಿಟ್ಟು ಹೋದರೆ? ಇಲ್ಲ, ಹಾಗೆ ಮಾಡಿರಲಿಕ್ಕಿಲ್ಲ ಎಂದು ತಾನೇ ಮನಸ್ಸಿಗೆ ಉತ್ತರ ಕೊಟ್ಟುಕೊಂಡಳು. ಸಂಜೆಯಿಂದ ಬಾಲನ ಒಂದು ಮೆಸೇಜು ಇಲ್ಲವಲ್ಲ? ಅವನಿಗೂ ಗಡಿಬಿಡಿ, ಮೆಸೇಜ್ ಹೇಗೆ ಮಾಡ್ತಾನೆ? ಪ್ರಶ್ನೆಗೆ ಪ್ರಶ್ನೆಯೇ ಉತ್ತರ. ಇಲ್ಲಿ ಕಾದು ರೈಲ್ವೆ ಸ್ಟೇಷನಿಗೆ